## ದಕ್ಕುವಂತಾಯಿತು ಮಾಹಿತಿಯ ಹಕ್ಕು

ಇತ್ತೀಚಿನ ದಿನಗಳಲ್ಲಿನ ಹಲವಾರು ಉಪದ್ರವಗಳ ಮಧ್ಯೆ, ಕೆಲವು ತಿಂಗಳುಗಳ ಹಿಂದೆ, ಭಾರತದ ಸಂಸತ್ತು ಅನುಮೋದಿಸಿದ ಮಾಹಿತಿ ಹಕ್ಕು ಕಾಯಿದೆ (Right to Information Act) ಜನರ ಗಮನಕ್ಕೆ ಬಂದಂತಿಲ್ಲ. ಇತ್ತೀಚಿಗೆ ಅದಕ್ಕೆ ಅನಗತ್ಯ ತಿದ್ದುಪಡಿಗಳನ್ನು ಮಾಡಲು ಸರ್ಕಾರ ಹೊರಟಿತು; ಆದರೆ ಬಾಬಾ ಆಮ್ಟೆ ಮುಂತಾದ ಧುರೀಣರೇ ಇವನ್ನು ವಿರೋಧಿಸಿದ್ದರಿಂದ ಹಿಮ್ಮೆಟ್ಟಿತು.

ನಾವು ಸರ್ಕಾರಿ ಕಛೇರಿಗೆ ನಮ್ಮದೊಂದು ಕೆಲಸಕ್ಕೆ ಅರ್ಜಿ ಹಾಕುತ್ತೇವೆ. ಆದರೆ ಹಲವಾರು ತಿಂಗಳಾದರೂ ಅದಕ್ಕೆ ಉತ್ತರವೇ ಬರುವುದಿಲ್ಲ. ಮುಖತಃ ಹೋಗಿ ವಿಚಾರಿಸಿದರೆ ಸರಿಯಾದ ಉತ್ತರ ದೊರಕುವುದಿಲ್ಲ. ಅರ್ಜಿಯ ಸ್ಥಿತಿ ಏನಾಯಿತು ಎಂದು ಪರದಾಡುವ ಪ್ರಸಂಗ. ಇದು ನಾವು ಸಾಮಾನ್ಯವಾಗಿ ಅನುಭವಿಸುವ ಪಾಡು.

ಇನ್ನು ಮುಂದೆ ಹೀಗಾಗಬೇಕಾಗಿಲ್ಲ. ಮಾಹಿತಿ ಹಕ್ಕು ಕಾಯಿದೆಯ ಪ್ರಕಾರ, ಅರ್ಜಿದಾರನಿಗೆ ತನ್ನ ಅರ್ಜಿಯ ಸ್ಥಿತಿಗತಿಯನ್ನು ತಿಳಿಯುವ ಅಧಿಕಾರ ಉಂಟು. ಅದಕ್ಕಾಗಿ ಅವನು ಮನವಿ ಸಲ್ಲಿಸಿದರೆ, ಅದಕ್ಕೆ ಸಂಬಂಧಪಟ್ಟ ಸರಿಯಾದ ಮಾಹಿತಿಯನ್ನು ನೀಡುವುದು ಕಛೇರಿಯ ನಿರ್ವಾಹಕರ ಕರ್ತವ್ಯ ಮಾತ್ರವಲ್ಲ, ಬಾಧ್ಯತೆ ಕೂಡ. ಈ ಕಾಯಿದೆಯ ಪ್ರಕಾರ ಮಾಹಿತಿ ನೀಡಲು ನಿರಾಕರಿಸುವುದು ಶಿಕ್ಷಾರ್ಹ ಅಪರಾಧ.

ರೇಷನ್ ಕಾರ್ಡು, ಮಾಸಾಶನ, ಪಿಂಚಣಿ, ಭೂಮಿ ಹಕ್ಕುಪತ್ರ –ಮುಂತಾದ ಹಲವು ಸಂದರ್ಭಗಳಲ್ಲಿ ಈ ಕಾಯಿದೆಯ ಪ್ರಯೋಜನವನ್ನು ಸಾಮಾನ್ಯ ಜನರು ಕೂಡ ಅಸಾಮಾನ್ಯ ರೀತಿಯಲ್ಲಿ ಪಡೆದುಕೊಳ್ಳುತ್ತಿದ್ದಾರೆ.

ಯಾವುದೇ ಸಾರ್ವಜನಿಕ ಸಂಸ್ಥೆಯ ವ್ಯವಹಾರಗಳಲ್ಲಿ ಪಾರದರ್ಶಕತೆ ಇರಬೇಕಾದ್ದು ಅವಶ್ಯಕ. ಇಲ್ಲದಿದ್ದರೆ, ಭ್ರಷ್ಟಾಚಾರ ತಲೆ ಎತ್ತುತ್ತದೆ. ಇದನ್ನು ತಡೆಗಟ್ಟಲು ಈ ಕಾಯಿದೆ ಪರಿಣಾಮಕಾರಿ ಸಾಧನವಾಗಿದೆ.

ವೈಯಕ್ತಿಕ ಉಪಯೋಗದೊಂದಿಗೆ, ಸಾಮಾಜಿಕ ಹಿತಾಸಕ್ತಿಯ ವಿಚಾರದಲ್ಲೂ ಇದರ ಉಪಯುಕ್ತತೆ ಗಣನೀಯವಾದುದು. ಒಂದು ಮಹತ್ವದ ನಿರ್ಧಾರವನ್ನು ಸರ್ಕಾರ ಕೈಗೊಂಡಾಗ ಅದನ್ನು ಕೆಲವು ಸಂಘಸಂಸ್ಥೆಗಳು ವಿರೋಧಿಸಿ, ನ್ಯಾಯಾಲಯದ ಮೊರೆ ಹೋಗುವುದು ಇತ್ತೀಚಿನ ದಿನಗಳಲ್ಲಿ ಸಾಮಾನ್ಯ. ಆದರೆ ಆ ನಿರ್ಧಾರವನ್ನು ಹೇಗೆ, ಯಾವ ಆಧಾರದ ಮೇಲೆ ತೆಗೆದುಕೊಳ್ಳಲಾಯಿತು? ಆ ನಿರ್ಧಾರವನ್ನು ಕೈಗೊಳ್ಳುವಲ್ಲಿ ಪಾಲಿಸಲಾದ ರೀತಿನಿಯಮಗಳು ಸಿಂಧುವಾಗಿವೆಯೇ? – ಈ ಎಲ್ಲ ಅಂಶಗಳು ಸಾರ್ವಜನಿಕರಿಗೆ ತಿಳಿಯಬೇಕಾದ ಆವಶ್ಯಕತೆ ಇದೆ. ಅದರ ಮಾಹಿತಿಯನ್ನು ಈ ಕಾಯಿದೆಯ ಮೂಲಕ ಪಡೆದುಕೊಳ್ಳಬಹುದು.

ಪ್ರತಿಯೊಬ್ಬ ಸರ್ಕಾರಿ ನೌಕರನಿಗೆ ನೈತಿಕ ಹಕ್ಕುಬಾಧ್ಯತೆ ಅತ್ಯಂತ ಆವಶ್ಯಕ. ಅದೇ ರೀತಿ ಸರ್ಕಾರದ ಕಾರ್ಯವೈಖರಿಯನ್ನು ಸಾರ್ವಜನಿಕರು ಪರೀಕ್ಷಿಸುವ ಒಂದು ಸುಭದ್ರ ವ್ಯವಸ್ಥೆಯಿದ್ದರೆ, ಜನರು ಸರ್ಕಾರವನ್ನು ಅನುಮಾನದಿಂದ ನೋಡುವುದು ತಪ್ಪುತ್ತದೆ.

ಆದರೆ ಅಧಿಕಾರಶಾಹಿಯು ಈ ಕಾಯಿದೆಯನ್ನು ವ್ಯರ್ಥಗೊಳಿಸುವ ಅಪಾಯವೂ ಯಾವಾಗಲೂ ಇದ್ದೇ ಇದೆ. ಸರ್ಕಾರದಲ್ಲಿರುವ ಕೆಲವು ಪಟ್ಟ ಭದ್ರ ಹಿತಾಸಕ್ತಿಗಳು ಹೇಗಾದರೂ ಮಾಡಿ ಈ ಕಾಯಿದೆಯ ಬಲವನ್ನು ಮೊಟಕುಗೊಳಿಸುವ ಪ್ರಯತ್ನ ಮಾಡುತ್ತಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಅದಕ್ಕಾಗಿ ಜನಶಕ್ತಿಯು ಜಾಗ್ರತವಾಗಿರುವುದು ಅತ್ಯಾವಶ್ಯಕ. ಇಲ್ಲವಾದರೆ ಮಾಹಿತಿಯ ಹಕ್ಕು ಕಳೆದುಹೋದೀತು. ಎಚ್ಚರ!

**ವಾರ್ತಾ ವಿಶ್ಲೇಷಣೆ**

## ಜಲದಿಂದ ಜೀವನ

**ಯಾ ಆಪೋ ದಿವ್ಯಾ ಉತ ವಾ ಸ್ರವಂತಿ ಖನಿತ್ರಿಮಾ ಉತ ವಾ ಯಾಃ ಸ್ವಯಂಜಾಃ । ಸಮುದ್ರಾರ್ಥಾ ಯಾಃ ಶುಚಯಃ ಪಾವಕಾಸ್ತಾ ಆಪೋ ದೇವೀರಿಹ ಮಾಮವಂತು॥** **"ಯಾವ ನೀರುಗಳು ಸ್ವರ್ಗಲೋಕದಲ್ಲಿ ಉತ್ಪನ್ನವಾಗಿವೆಯೋ ಮತ್ತು ಯಾವುವು ಪ್ರವಹಿಸುತ್ತವೆಯೋ, ಅಲ್ಲದೆ ಯಾವ ನೀರುಗಳು ತಮ್ಮ ಅಡ್ಡಿಗಳನ್ನು ಸೀಳಿಕೊಂಡು ಹೊರಹೊರಟು ಹರಿಯುತ್ತವೆಯೋ, ಮತ್ತೆ ಯಾವ ಜಲಗಳು ತಾವಾಗಿಯೇ ಪ್ರಾದುರ್ಭವಿಸಿ ಸಮುದ್ರವನ್ನು ಹೋಗಿ ಸೇರುತ್ತವೆಯೋ, ದೇವತಾತ್ಮಗಳಾದ ಅದೇ ಉದಕಗಳು ಈ ಯಜ್ಞದಲ್ಲಿ ನಿರತನಾದ ನನ್ನನ್ನು ರಕ್ಷಿಸಲಿ"** – ಇದು ಋಗ್ವೇದದಲ್ಲಿ ಬರುವ ಪ್ರಾರ್ಥನೆ. ಜಲ ಜೀವನದ ಮೂಲ. ಎಲ್ಲ ಸಂಸ್ಕೃತಿ ಮತ್ತು ನಾಗರೀಕತೆಗಳಿಗೆ ಕೇಂದ್ರಬಿಂದು. ನಮ್ಮ ಪುರಾತನ ಸಂಸ್ಕೃತಿ ಜನಿಸಿದ್ದು, ಬೆಳೆದು ಬಂದಿದ್ದು ನದಿಗಳ ಕಣಿವೆಯಲ್ಲಿಯೇ. ನೀರು ನಮ್ಮ ಜೀವರಕ್ಷಕ ಮಾತ್ರವಲ್ಲ, ಮಾನವ ಚೈತನ್ಯದ ಪೋಷಕ ಕೂಡ.

ಮಾನವ ಇತಿಹಾಸದೊಡನೆ ಹಾಸುಹೊಕ್ಕಾಗಿರುವ ಜಲ ಸಂಪನ್ಮೂಲವು ಬತ್ತಿಹೋಗುವ ಕಾಲ ಬಂದೀತೆ? ಕೆಲವು ತಥ್ಯಾಂಶಗಳನ್ನು ನೋಡೋಣ. ಜಗತ್ತಿನಲ್ಲಿ ದೊರಕುವ ನೀರಿನಲ್ಲಿ ಶೇ. ೯೭ ಭಾಗ ಉಪ್ಪು ನೀರಾದರೆ, ಕೇವಲ ಶೇಕಡ ಮೂರು ಭಾಗ ಮಾತ್ರ ಕುಡಿಯಲು ಅರ್ಹವಾದ ಸಿಹಿನೀರು. ಆ ಸಿಹಿನೀರಿನಲ್ಲಿ ಮುಕ್ಕಾಲು ಭಾಗ ಮಂಜುಗಡ್ಡೆಯಾಗಿ ಧ್ರುವ ಪ್ರದೇಶಗಳಲ್ಲಿ ಇದ್ದರೆ, ಕೇವಲ ಕಾಲು ಭಾಗ ಮಾತ್ರ ನಮ್ಮ ಉಪಯೋಗಕ್ಕೆ ಲಭ್ಯ. ಅಂದರೆ ಒಟ್ಟು ನೀರಿನ ಪ್ರಮಾಣದ ಕೇವಲ ಶೇ. ೦.೫ ರಷ್ಟು ಮಾತ್ರ ಕುಡಿಯಲು ಯೋಗ್ಯ. ಈ ನೀರಿನ ಬಹುಭಾಗವೂ ಕೃಷಿಕಾರ್ಯ, ಔದ್ಯೋಗಿಕ ಉಪಯೋಗ ಮತ್ತು ಮನೆಗೆಲಸಗಳಿಗೆ ಖರ್ಚಾಗುತ್ತಿದೆ.

ಜಗತ್ತಿನ ಜನಸಂಖ್ಯೆಯ ಶೇ.೧೬ರಷ್ಟು ಜನ ಭಾರತದಲ್ಲಿ ಇದ್ದರೂ ಒಟ್ಟು ಜಲಸಂಪನ್ಮೂಲದ ಶೇಕಡ ೪.೫ ಮಾತ್ರ ಇಲ್ಲಿ ಲಭ್ಯ. ಇದು ನಮ್ಮ ನೀರಿನ ಸಮಸ್ಯೆಯು ಎಷ್ಟು ತೀವ್ರವಾಗಬಲ್ಲುದು ಎನ್ನುವುದನ್ನು ಎತ್ತಿತೋರಿಸುತ್ತದೆ. ನಮ್ಮಲ್ಲಿ ಒಂದೆಡೆ ಪ್ರವಾಹವಾದರೆ, ಇನ್ನೊಂದೆಡೆ ಕುಡಿಯುವ ನೀರಿಗೂ ಘೋರ ಅಭಾವ. ನಮ್ಮ ಜನಸಂಖ್ಯೆಯಲ್ಲಿ ಆಗಿರುವ ಅಪಾರ ಹೆಚ್ಚಳ, ನಗರೀಕರಣ ಮೊದಲಾದವುಗಳಿಂದ ನೀರಿಗೆ ಎಲ್ಲಿಲ್ಲದ ಬೇಡಿಕೆ. ೨೦೨೫ರ ಹೊತ್ತಿಗೆ ಈಗಿರುವ ಬೇಡಿಕೆಗಿಂತ ಶೇ. ೭೦೦ ರಷ್ಟು ಹೆಚ್ಚು ನೀರಿನ ಬೇಡಿಕೆ ಉಂಟಾಗಬಹುದೆಂದು ತಜ್ಞರು ಹೇಳುತ್ತಾರೆ. ಅಷ್ಟು ನೀರನ್ನು ಒದಗಿಸಲು ಸಾಧ್ಯವೆ?

ಏನೇ ಆಗಲಿ ಸದ್ಯದ ಪರಿಸ್ಥಿತಿ ಬಹಳ ಅಪಾಯಕಾರಿ. ಹಾಗೆಂದೇ **ಜಲ ಸಂಪನ್ಮೂಲಗಳ ಯೋಜನೆ, ರಕ್ಷಣೆ ಮತ್ತು ನಿರ್ವಹಣೆಯ ಬಗ್ಗೆ ರಾಷ್ಟ್ರೀಯ ಸಮಾವೇಶವೊಂದು** ಇದೇ ಆಗಸ್ಟ್ ೧೨ ಮತ್ತು ೧೩ರಂದು ಮೈಸೂರಿನಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಅಂತರ್ಜಲ, ಜಲಸಂರಕ್ಷಣಾ ವಿಧಾನಗಳು, ಮಳೆನೀರು ಬೇಸಾಯ, ಮುಖ್ಯ ನದಿಗಳಲ್ಲಿ ನೀರಿನ ಹರಿವಿನ ನಿರ್ವಹಣೆ, ಗ್ರಾಮೀಣ ನೀರು ಸರಬರಾಜು, ಪರಿಸರ ಮಾಲಿನ್ಯ, ಜಲ ನಿರ್ವಹಣೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳ ಸಹಯೋಗ – ಈ ತೆರನ ಹಲವು ಹತ್ತು ಉಪಯುಕ್ತ ವಿಷಯಗಳ ಬಗ್ಗೆ ೬೫ ಕ್ಕೂ ಹೆಚ್ಚು ಪ್ರಬಂಧಗಳನ್ನು ಮಂಡಿಸಲಾಯಿತು. ಅನೇಕ ಪ್ರತಿಷ್ಠಿತ ತಾಂತ್ರಿಕ ತಜ್ಞರು ಇದರಲ್ಲಿ ಪಾಲ್ಗೊಂಡಿದ್ದರು. ಸರ್ಕಾರಕ್ಕೆ ಅನೇಕ ಶಿಫಾರಸುಗಳನ್ನು ಕಳುಹಿಸಲಾಯಿತು. ಪ್ರಾರಂಭದಲ್ಲಿ ಉದಾಹರಿಸಿದ ಋಗ್ವೇದ ಮಂತ್ರದಲ್ಲಿ ಧ್ವನಿಸಿರುವ ಜಲಸಂಪನ್ಮೂಲದ ಮಹತ್ವ ಮತ್ತು ಸಂರಕ್ಷಣೆಯ ಭಾವನೆಗಳನ್ನು ಈ ಸಮಾವೇಶ ಪ್ರತಿಧ್ವನಿಸಿತು ಎನ್ನುವುದು ಮಹತ್ವವಾದ ಸಂಗತಿ. ಭಾರತೀಯ ಸಂಸ್ಕೃತಿಯಲ್ಲಿ ಒಡಮೂಡಿರುವ ನೀರಿನ ಬಗೆಗಿನ ಪೂಜ್ಯ ಭಾವನೆಯನ್ನು ಇಂದು ಪುನರುತ್ಥಾನಗೊಳಿಸಬೇಕು. ನೀರಿಗೇ ಸಂಚಕಾರ ಬಂದರೆ ಮನುಕುಲಕ್ಕೆ ಗತಿಯೆಲ್ಲಿ?

**– ಎನ್.ಎಸ್. ಚಕ್ರವರ್ತಿ, ಮೈಸೂರು**